ಹಿಂದಿದ್ದ ಉದ್ದೇಶವಾಗಿತ್ತು. ಈಗ ಅಲ್ಲಿ ಮಾವಿನ ಇನ್ನೂರು-ಇನ್ನೂರೈವತ್ತು ಮರಗಳಿದ್ದವು. ಆದರೆ, ಈಗ ಈ ತೋಟದ ಹೆಸರು ಬದಲಾಗಿತ್ತು. ಈಗ ಜನ ಇದನ್ನು 'ಭೂತದ ತೋಟ' ಎನ್ನುತ್ತಿದ್ದರು. ಯಾಕೆಂದರೆ, ಮುಖಂಡ ಬಾಲಕಿಶನ್ ಸಿಂಗ್‌ನ ಭೂತ ಅಲ್ಲಿ ವಾಸಮಾಡಲು ಆರಂಭಿಸಿತ್ತು. ರಾತ್ರಿ ವೇಳೆಯಲ್ಲಿ ಅತ್ತ ಕಡೆಗೆ ಹೋಗುವ ಜನರ ಧೈರ್ಯ ಉಡುಗುತ್ತಿತ್ತು. ಬಾಲಕಿಶನ್ ಸಿಂಗ್‌ರ ಜ್ಯೇಷ್ಠ ಪುತ್ರ ಚೌಧರಿ ಕಿಶನಪಾಲ್ ಸಿಂಗ್, ಒಮ್ಮೆ ಅತ್ತ ಕಡೆಯಿಂದ ಹಾದು ಹೋಗುವಾಗ, ಅವನಿಗೆ ಹೆಣ್ಣೊಬ್ಬಳು ರೋದಿಸುವ ಧ್ವನಿ ಕೇಳಿಸಿತು. ಅವರು ಪೊದೆಗಳು, ಮರಗಿಡಗಳ ಸಂಧಿಗಳಲ್ಲಿ ಹುಡುಕಿದಾಗ ಏನೂ ಕಾಣಲಿಲ್ಲ. ಅವನ ತಲೆಯ ಕೂದಲುಗಳು ಸೆಟೆದು ನಿಂತವು. ಪಂಚೆಯ ಬೆಲ್ಟ್ ಕಳಚಿತು, ಅವನು 'ಆಂಜನೇಯ-ಆಂಜನೇಯ' ಎಂದು ಜಪಿಸುತ್ತಾ ಓಟಕಿತ್ತಿದ್ದ.

ಅಂದಿನಿಂದ ಅಲ್ಲಿ ರಾತ್ರಿ ವೇಳೆಯಲ್ಲಿ ಮಹಿಳೆಯೊಬ್ಬಳು ನರಳುವ ಅಥವಾ ರೋದಿಸುವ ಕರುಣಾಜನಕ ಧ್ವನಿ ಕೇಳಿ ಬರಲಾರಂಭಿಸಿತು. ಅಲ್ಲಿ ಹಗಲು ವೇಳೆಯಲ್ಲಿ ಜಾನುವಾರುಗಳ ಎಲುಬುಗಳು, ದವಡೆಗಳು ಅಥವಾ ಬಳೆಗಳ ತುಂಡುಗಳು ಕಾಣ ಬರುತ್ತಿದ್ದವು. ಹಳ್ಳಿಯ ಕೆಲವು ಪೋಕರಿಗಳು, ಆ ತೋಟದಲ್ಲಿ ಭೂತವಿಲ್ಲ, ಆ ಬೇವರ್ಸಿ ತೋಟವನ್ನು ಮಜ ಮಾಡಲು ಬಳಸಿಕೊಂಡಿದ್ದಾನೆ, ಎಲ್ಲವೂ ಮುಖಂಡ ಹಬ್ಬಿಸಿದ ವದಂತಿ ಎನ್ನುತ್ತಿದ್ದರು.

ಒಮ್ಮೆ ನಾನು ಪಕ್ಕದ ಹಳ್ಳಿಯಲ್ಲಿ ನಡೆಯುವ ಮದುವೆಗೆ ಹೋಗಿದ್ದೆ. ಮರಳಿ ಬರುವಾಗ ರಾತ್ರಿಯಾಯಿತು. ಹನ್ನೆರಡು ಗಂಟೆಯಾಗಿರಬೇಕು. ನನ್ನ ಜೊತೆಯಲ್ಲಿ ರಾಧೆ, ಸಂಭಾರೂ ಮತ್ತು ಬಲದೇವರಿದ್ದರು. ತೋಟದ ಮಧ್ಯದಿಂದ ರಸ್ತೆ ಹಾದು ಹೋಗುತ್ತಿತ್ತು. ನಾವು ಕೈಯಲ್ಲಿ ದೊಣ್ಣೆಗಳನ್ನು ಹಿಡಿದಿದ್ದೆವು. ಅಕಸ್ಮಾತ್ ಒಂದು ಜಾಗದಿಂದ ಒಣ ಎಲೆಗಳ ಚರಚರ ಸದ್ದು ಕೇಳಿಸಿತು. ಕಾಡು ಹಂದಿಯೊಂದು ಹಿಂದು-ಮುಂದು ನೋಡದೆ ಎಲೆಗಳನ್ನು ತುಳಿಯುತ್ತಾ ನಮ್ಮೆಡೆಗೆ ಬರುತ್ತಿದೆ ಎಂದು ಅನ್ನಿಸಿತು. ನಾವು ನಿಂತು ಶಬ್ದವನ್ನು ಆಲಿಸಿದೆವು. ಬೇಸಿಗೆಯ ರಾತ್ರಿಯಾಗಿತ್ತು. ಜ್ಯೇಷ್ಠ ಮಾಸ. ಅಕಸ್ಮಾತ್ ಧ್ವನಿ ಸ್ಥಿರವಾದಂತಾಯಿತು. ನಿಶ್ಶಬ್ದತೆ ವ್ಯಾಪಿಸಿತು. ನಾವು ಆಸರೆ ಹುಡುಕಿದೆವು. ಒಳಗೊಳಗೆ ಭಯವಾಗುತ್ತಿತ್ತು. ಬಲದೇವ ಮುಂದುವರೆದು ಹೋಗಿ ಕೇಳಿದ, 'ಯಾವನಲೇ?' ಅವನ ನರಗಳು ಸಡಿಲಗೊಂಡಿದ್ದಾಗ್ಯೂ ನೆಲಕ್ಕೆ ಲಾಠಿಯಿಂದ ಬಡಿದ. ಮುಖಂಡನ ಭೂತವಾಗಿದ್ದರೆ? ನಾನು ಹೇಗೋ ಧೈರ್ಯಗೂಡಿಸಿ ಹೇಳಿದೆ, 'ಯಾವನಲೇ, ಹೋ-ಹೋ.' ಬಲದೇವ ಮುಂದೆ ಹೋದದ್ದನ್ನು ನೋಡಿ ಸಂಭಾರೂ ಸಹ ಹುಚ್ಚನಂತೆ ಎಡ-ಬಲ, ಮೇಲೆ-ಕೆಳಗೆ ಲಾಠಿಯಿಂದ ಹೊಡೆಯುತ್ತಾ ಅತ್ತ ಕಡೆಗೇ ಹೋದ.

ಆಗಲೇ ಒಂದು ಸೂಕ್ಷ್ಮ ಹಾಗೂ ತಟಸ್ಥ ಧ್ವನಿ ಕೇಳಿಸಿತು, 'ಅಣ್ಣಾ, ನಾವು.'

'ಯಾವನಲೇ ನೀನು?' ಬಲದೇವ ಗದರಿದ.

ಟೇಪಚೂ ಕತ್ತಲಿನಿಂದ ಹೊರ ಬಂದು ಹೇಳಿದ, 'ಚಿಕ್ಕಪ್ಪ, ನಾನು ಟೇಪಚೂ.' ಟೇಪಚೂ ತೋಟದಲ್ಲಿ ಆಗ-ಈಗ ಮೂಡುತ್ತಿದ್ದ ಅಂಧಕಾರದಲ್ಲಿ ನಿಂತಿದ್ದ. ಅವನ ಕೈಯಲ್ಲಿ ಚೀಲವಿತ್ತು. ನನಗೆ ಆಶ್ಚರ್ಯವಾಯಿತು, 'ಇಷ್ಟು ರಾತ್ರಿಯಲ್ಲಿ ಅದೇನು ಮಾಡ್ತಿದ್ದೀಯ, ಹುಳ ನನ್ಮಗನೇ!'

ಟೇಪಚೂ ಸ್ವಲ್ಪ ಹೊತ್ತು ಸುಮ್ಮನಿದ್ದ. ನಂತರ ಹೆದರುತ್ತಾ ಹೇಳಿದ, 'ಅವ್ವನಿಗೆ ಬಿಸಿಲ ಹೊಡೆತ ಬಿದ್ದಿದೆ. ಅವಳು ಮಧ್ಯಾಹ್ನ ಮುಖಂಡರ ತೋಟ ಕಾಯಲು ಹೋಗಿದ್ದಳು, ಮಾವಿನ ಮಿಡಿಯ ರಸ ಕುಡಿದರೆ ಸರಿಯಾಗ್ತೀನಿ ಅಂತ ಅವ್ವ ಹೇಳಿದಳು, ತುಂಬಾ ಜ್ವರವಿತ್ತು.'

'ನಿನಗೆ ಭೂತದ ಭಯವಾಗಲಿಲ್ವ? ಒಂದಲ್ಲ ಒಂದು ದಿನ ನಿನ್ನ ಹೆಣ ಯಾವುದಾದರೂ ಪೊದೆಯಲ್ಲಿ ಸಿಗುತ್ತೆ...' ಎಂದ ರಾಧೆ.

ಟೇಪಚೂ ನಮ್ಮೊಂದಿಗೇ ಹಳ್ಳಿಗೆ ಮರಳಿ ಬಂದ. ಮಾರ್ಗದಲ್ಲಿ ಮಾತನಾಡಲಿಲ್ಲ. ಅವನ ಮನೆಗೆ ಹೋಗುವ ತಿರುವು ಬಂದಾಗ ಹೇಳಿದ, 'ಚಿಕ್ಕಪ್ಪ, ಮುಖಂಡರಿಗೆ ಈ ವಿಷಯ ಹೇಳ್ಬೇಡ, ಅವನಿಗೆ ಗೊತ್ತಾದರೆ ನನ್ನನ್ನು ಹೊಡೆದು-ಬಡಿದು ಅಪ್ಪಚ್ಚಿ ಮಾಡ್ತಾರೆ.'

ಟೇಪಚೂ ಆಗ ಏಳೆಂಟು ವಯಸ್ಸಿನವನಾಗಿರಬಹುದು.

ಇನ್ನೊಮ್ಮೆ ಏನಾಯಿತೆಂದರೆ, ಟೇಪಚೂ ತನ್ನ ಅಮ್ಮನೊಂದಿಗೆ ಜಗಳ ಮಾಡಿಕೊಂಡು ಮನೆ ಬಿಟ್ಟು